ಅಧ್ಯಕ್ಷರು.—ನಾಳೆ ನಿಮ್ಮ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

———

ಅಧ್ಯಕ್ಷರು.—ಮಾನ್ಯ ಜರತಾರ್‌ಗರ್‌ರವರೇ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ತೆಗೆದು ಕೊಳ್ಳೋಣ. ನೀವು ಮಾನ್ಯ ಮಂತ್ರಿಗಳ ಗವನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ :

ವಿಷಯ :– ಹುಬ್ಬಳ್ಳಿಯಲ್ಲಿರುವ ಸುಂದತ್ತ ಫುಡ್ಸ್ ಮತ್ತು ಫೈಬರ್ಸ್ ಬೀಗಮುದ್ರೆಯ ಬಗ್ಗೆ

ಶ್ರೀ ಜರತಾರ್‌ಗರ್.—ಸ್ವಾಮಿ ನಾನು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರಚಾರ ಸಚಿವರು).—ಹುಬ್ಬಳ್ಳಿಯಲ್ಲಿರುವ ಸುಂದತ್ತ ಫುಡ್ಸ್ ಮತ್ತು ಫೈಬರ್ಸ್ ಸಂಸ್ಥೆಯ ಹತ್ತಿ ಬೀಜಗಳಿಂದ ಎಣ್ಣೆಯನ್ನು ತೆಗೆಯುವ ಒಂದು ಉದ್ಯಮ ವಾಗಿದ್ದು ಸುಮಾರು 600 ಜನ ಕೆಲಸಗಾರರು ಕೆಲಸಕ್ಕೆ ಇಟ್ಟು ಕೊಂಡಿದೆ. ಕೆಲಸಗಾರರು ಮತ್ತು ಆಡಳಿತ ವರ್ಗದವರ ಮಧ್ಯೆ 1980–81ರಲ್ಲಿ ಮತ್ತು 1982ರಲ್ಲಿ ಒಂದು ಒಪ್ಪಂದವಾಗಿದ್ದು ಅದು 31–12–1983ರ ವರೆಗೆ ಜಾರಿಯಲ್ಲಿರುತ್ತದೆ. ಈ ಒಪ್ಪಂದದಲ್ಲಿರುವ ಒಂದು ವಿಧಿ ಪ್ರಕಾರ ಕೆಲಸ ಗಾರರು 1983ನೇ ವರ್ಷದ ಕೊನೆವರೆಗೆ ಆಡಳಿತ ವರ್ಗದ ಮೇಲೆ ಹಣಕಾಸಿನ ಭಾರ ಹಾಕುವಂತಹ ಯಾವುದೇ ಬೇಡಿಕೆಗಳನ್ನು ಇರುವಂತಿಲ್ಲ. 1983ರ ಮೊದಲಲ್ಲಿ ಆಡಳಿತ ವರ್ಗದವರು ಸುಮಾರು 129 ಜನ ಕೆಲಸಗಾರರಿಗೆ ವೇತನದಲ್ಲಿ ವಿಶೇಷ ಹೆಚ್ಚಳವನ್ನು ಮಂಜೂರು ಮಾಡಿದ್ದಾರೆಂದೂ ವರದಿಯಾಯಿತು ಇತರ ಕೆಲಸಗಾರರು ತಮಗೆಲ್ಲರಿಗೂ ಅದೇ ರೀತಿಯ ಹೆಚ್ಚಳವನ್ನು ಕೊಡಬೇಕೆಂದೂ ಬೇಡಿಕೆಯನ್ನು ಮುಂದಿಟ್ಟರು, ಆದರೆ ಆಡಳಿತ ವರ್ಗದವರು ಆ ರೀತಿಯ ಬೇಡಿಕೆಯನ್ನು ಒಪ್ಪಲಾಗುವುದಿಲ್ಲವೆಂಬ ನಿಲುವನ್ನು ತಳೆದರು. ತಮ್ಮ ಬೇಡಿಕೆಯ ಈಡೇರಿಕೆಗಾಗಿ ಕೆಲಸಗಾರರು ಒಂದು ಹೋರಾಟವನ್ನು ಪ್ರಾರಂಭಿಸಿದರು. ಇದರ ಫಲವಾಗಿ 21 ಜನ ಕೆಲಸಗಾರರ ಸಸ್‌ಪೆನ್‌ಶನ್ ಆಯಿತು. ಕೊನೆಗೆ ಆಡಳಿತ ವರ್ಗದವರು 4–6–1983ರಿಂದ ಬೀಗ ಮುದ್ರೆ ಘೋಷಿಸಿದರು. ಈ ವಿಷಯವನ್ನು ಸಂಧಾ ನಕ್ಕೆ ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಕಮಿಷನರ್‌ರವರು ಕೈಗೆತ್ತಿಗೊಂಡರು. ಅನೇಕ ಪ್ರಯತ್ನ ಗಳಾದ ನಂತರ ಸಹಾಯಕ ಕಾರ್ಮಿಕ ಕಮಿಷನರ್‌ರವರು ಒಂದು ವಿಫಲ ವರದಿಯನ್ನು ಕಳುಹಿಸಿ, ವಿಶೇಷ ವೇತನ ಹೆಚ್ಚಳದ ವಿಷಯವನ್ನು ನ್ಯಾಯ ಪಂಚಾಯಿತಿಗೆ ಒಪ್ಪಿಸುವಂತೆಯೂ ಬೀಗ ಮುದ್ರೆಯ ಮುಂದುವರಿಕೆಯನ್ನು ಘೋಷಿಸಿದರು. ಶಿಫಾರಸ್ಸು ಮಾಡಿದರೂ ಇಂತಹ ವರದಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂಚೆ ವಿವಾದದ ವಿಷಯಗಳ ಮೇಲೆ ಚರ್ಚೆಯನ್ನು ಮುಂದುವರೆಸಲಾಯಿತು. 7-6-1983ರಂದು ಮಾನ್ಯ ಕಾರ್ಮಿಕ ಮಂತ್ರಿಗಳು ಹುಬ್ಬಳ್ಳಿಯಲ್ಲಿ ಪ್ರವಾಸದ ಮೇಲೆ ಹೋಗಿದ್ದಾಗ ಅವರ ಮುಂದೆ ನಡೆದ ಒಂದು ಸಭೆಯಲ್ಲಿ ಒಪ್ಪಂತವು 31–12–1983ರವರೆಗೆ ಜಾರಿಯಲ್ಲಿ ಇದ್ದರೂ ಸಹ ಕೆಲಸಗಾರರು ಹೊಸ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಬಹುದೆಂದೂ ಆ ಪಟ್ಟಿಯ ಮೇಲೆ ಚರ್ಚೆ ನಡೆಸಿ ಒಪ್ಪಂದಕ್ಕೆ ಬರಲು ಪ್ರಯತ್ನಿಸಬಹುದೆಂದು ಮಂತ್ರಿವರ್ಯರು ಸಲಹೆ ಮಾಡಿದರು. ಆದರೆ ಆಡಳಿತ ವರ್ಗದವರು ಇದಕ್ಕೆ ಮೊದಲು ಒಪ್ಪಿದರೂ ನಂತರ ಅಂತಹ ಒಂದು ಪರಿಸ್ಥಿತಿಯನ್ನು ಒಪ್ಪಲು ಸಿದ್ಧರಿರ ಲಿಲ್ಲ. ಈಗ ವರದಿಯಾಗಿರುವಂತೆ ಆಡಳಿತ ವರ್ಗದವರು ಬೀಗ ಮುದ್ರೆಯನ್ನು 2–8–1983ರಿಂದ ತೆರವು ಮಾಡಿದ್ದಾರೆಂದೂ ಆದರೆ ಕೆಲಸಗಾರರು ವೈಯುಕ್ತಿಕವಾಗಿ ಒಂದು ನಡೆವಳಿಕೆ ಪತ್ರವನ್ನು ಕೊಟ್ಟು ಕೆಲಸಕ್ಕೆ ಬರಬೇಕೆಂದೂ ಒತ್ತಾಯ ಮಾಡಿದ್ದಾರೆಂದೂ ತಿಳಿದು ಬಂದಿದೆ. ಈ ನಡವಳಿಕೆ ಪತ್ರದಲ್ಲಿ ಕೆಲಸಗಾರರು ಒಳ್ಳೆಯ ನಡೆವಳಿಕೆಯನ್ನು ಮತ್ತು ಉತ್ಪಾದನಾ ಮಟ್ಟವನ್ನು ಕಾಯ್ದುಕೊಂಡು ಬರ ಬೇಕೆಂದು ಒಪ್ಪಿಕೊಳ್ಳಬೇಕೆಂದು ಕೇಳಲಾಗಿದೆ. ಇಂತಹ ನಡವಳಿಕೆ ಪತ್ರವನ್ನು ಕೊಡಲು ಕೆಲಸಗಾರರ ಸಂಘದವರು ತಯಾರಿಲ್ಲ. ಅವರ ಪ್ರಕಾರ ಇಂತಹ ಒಂದು ಒತ್ತಾಯ ಬೀಗ ಮುದ್ರೆಯನ್ನು ಮುಂದು ವರೆಯುವಂತಾಗುತ್ತದೆ. ಈ ಎಲ್ಲಾ ವಿಷಯಗಳ ಬಗ್ಗೆ 17–8–1983ರಂದು ಕಾರ್ಮಿಕ ಮಂತ್ರಿಗಳು ಹಾಗೂ ಕಾರ್ಮಿಕ ಕಮಿಷನರ್‌ರವರ ಮುಂದೆ ಚರ್ಚೆಯಾಗಿದ್ದು ಆಡಳಿತ ವರ್ಗದವರು ತಮ್ಮ ಬಿಗಿ ನಿಲುವನ್ನು ಹಿಂತೆಗಿದು ಕೂಂಡಿರುವುದಿಲ್ಲ ಆದರೂ ಸಹ ಆಡಳಿತ ವರ್ಗದ ಸಲುವನು ಬದಲಾಯಿಸುವಂತೆ ಪ್ರಯತ್ನವು ಮುಂದುವರೆಯುತ್ತಿದೆ.

ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಸುಂದತ್ತ ಫುಡ್ಸ್ ಅಂಡ್ ಫೈಬರ್ಸ್ ಫ್ಯಾಕ್ಟರಿಯವರು ಹೊರ ಬೀಗ ಹಾಕುವುದಕ್ಕೆ ಮೊದಲು ಆಡಳಿತ ವರ್ಗದವರು ಯಾವ ರೀತಿ ಕಾರ್ಮಿಕರನ್ನು ಬುದ್ಧಿ ಪೂರ್ವಕವಾಗಿ ತುಳಿಯುವುದಕ್ಕೆ ಪ್ರಯತ್ನ ಮಾಡಿದರು ಎನ್ನುವ ಬಗ್ಗೆ ಒಂದೆರಡು ಕ್ಲಾರಿಫಿಕೇಶನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಸುಂದತ್ತಾ ಫುಡ್ ಅಂಡ್ ಫೈಬರ್ಸ್ ಫ್ಯಾಕ್ಟರಿಯವರು ತಮ್ಮ 129 ಜನರಿಗೆ ಹೆಚ್ಚಿನ ವೇತನವನ್ನು ಕೊಟ್ಟರು. ಹೀಗೆ ಕೊಟ್ಟಿದ್ದರಿಂದಲೇ ಎಲ್ಲರಿಗೂ ಒಂದೇ ರೀತಿಯಾದ ವೇತನ ಕೊಡಬೇಕೆಂದು ಬಂದದ್ದು. ಆದರೆ, ಕಾರ್ಮಿಕರಲ್ಲಿ ಭಿನ್ನಭೇಧವನ್ನು ಮೂಡಿಸಿ ಗೊಂದಲಮಯ ವಾತಾವರಣವನ್ನು ನಿರ್ಮಾಣಮಾಡಬೇಕು ಮತ್ತು ಇದರಿಂದಾಗಿ ಈ ಫ್ಯಾಕ್ಟರಿಯವರು ಹೆಚ್ಚಿನ ಲಾಭವನ್ನು ಗಳಿಸಬೇಕೆಂಬ ಕುಯುಕ್ತಿಯಿಂದಾಗಿ ಈ ಕಾರ್ಯ ಮಾಡಿದ್ದಾರೆಂದರೆ ಅಡ್ಡಿಯಿಲ್ಲ. ಏಕೆಂದರೆ ಸುಂದತ್ತಾ ಆಡಳಿತ ಮಂಡಳಿಯವರು ಎಣ್ಣೆ ತೆಗೆದುಕೊಳ್ಳುವುದನ್ನು ಬಿಟ್ಟು ಒಂದು ಸಾವಿರ ಟನ್‌ಗೂ ಮೇಲ್ಪಟ್ಟು ಹತ್ತಿಬೀಜ ವಿಕ್ರಿ ಮಾಡದೆ ಹಣ ಸಂಪಾದನೆ ಮಾಡಿದ್ದನ್ನು ನೋಡುತ್ತೇವೆ.

ಕಾರ್ಮಿಕರನ್ನು ಹತ್ತಿಕ್ಕುವ ದೃಷ್ಟಿಯಿಂದ ಕಾರ್ಖಾನೆಯ ಆಡಳಿತ ವರ್ಗದವರು ಮುಂದಾಗಿದ್ದರು, ಇದರ ಜೊತೆಗೆ ಬೀಗ ಮುದ್ರೆ ಹಾಕುವುದಕ್ಕೆ ಬೇರೆ ಯಾವ ಕಾರಣಗಳೂ ಇರಲಿಲ್ಲ. ಬುದ್ಧಿಪೂರ್ವಕವಾಗಿ ಆಡಳಿತ ವರ್ಗ ಮತ್ತು ಲೇಬರ್ ಕಮೀಷನರ್ ಅವರು ಕೂಡಿಕೊಂಡು ಮಾಡಿದ ಒಂದು ಯೋಜನೆ ಇದು ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಬೀಗ ಮುದ್ರೆ ಹಾಕಿದ ನಂತರ ಒಂದು ಕಂಡಿಷನ್‌ನ್ನು ಹಾಕಲಾಯಿತು. ಅದೇನೆಂದರೆ ಕಾರ್ಮಿಕರು ಒಂದು ನಡವಳಿಕೆಯನ್ನು ಬರೆದುಕೊಡಬೇಕು ಬೀಗಮುದ್ರೆ ಹಾಕಿದ್ದು 4-6-1983ರಂದು ಮತ್ತು ಬೀಗಮುದ್ರೆಯನ್ನು ತೆಗೆದದ್ದು 2-8-1983ರಂದು ಬೀಗ ಮುದ್ರೆಯನ್ನು ತೆಗೆದರೂ ಕೂಡ ಪ್ರತ್ಯೇಕವಾಗಿ ನಡವಳಿಕೆಯನ್ನು ಬರಹದಲ್ಲಿ ಕೊಡಬೇಕೆಂದು ಕಾರ್ಮಿಕರ ಮೇಲೆ ಒತ್ತಾಯವನ್ನು ತರಲಾಯಿತು. ಆದರೆ ಅವರು ಯಾವ ರೀತಿಯಿಂದಲೂ ಅದನ್ನು ಮಾಡಲಿಲ್ಲ ಆದ್ದರಿಂದ ಇದು ಕಾರ್ಮಿಕರನ್ನು ತುಳಿಯುವ ಪ್ರವೃತ್ತಿಯೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಹೀಗೆ ಕಾರ್ಮಿಕರನ್ನು ತುಳಿಯುವಂಥ ಪ್ರವೃತ್ತಿ ಹೋಗಬೇಕು. ಈಗ ರಾಜ್ಯದಲ್ಲಿ ಇರತಕ್ಕಂಥ ಸರ್ಕಾರ ಕಾರ್ಮಿಕರ ಸರ್ಕಾರ. ಅವರಿಗೆ ಹಿತವಾಗುವಂತಹ ಉದ್ಯೋಗ ಅವರಿಗೆ ಪ್ರಾಪ್ತಿಯಾಗುವಂತೆ ಸೂಕ್ತ ಕ್ರಮವನ್ನು ಸರ್ಕಾರದವರು ಕೂಡಲೇ ತೆಗೆದುಕೊಳ್ಳಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾಗ ಅವರು ಆ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಅದೇ ಪ್ರಕಾರ ಕೈಗಾರಿಕಾ ಮಂತ್ರಿಗಳು ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ಕಳೆದ ಮೂರು ತಿಂಗಳಿಂದ ಕಾರ್ಮಿಕರು ಬೀದಿಪಾಲಾಗಿದ್ದಾರೆ. ನಾಳೆ ನೂರಾರು ಜನ ಕಾರ್ಮಿಕರು ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬರಬಹುದು ಮನೆಯಲ್ಲಿರತಕ್ಕ ಪಾತ್ರೆಗಳನ್ನು ಮಾರುವ ಪರಿಸ್ಥಿತಿ ಅವರಿಗೆ ಒದಗಿಬಂದಿದೆ. ಅವರಿಗೆ ಸೂಕ್ತ ಪರಿಹಾರ ಕೂಡಲೇ ನೀಡುವ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಈ ಕಾರ್ಮಿಕರಿಗೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಈಗಾಗಲೇ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಸಂಬಂಧಪಟ್ಟವರನ್ನು ಪ್ರಾಸಿಕ್ಯೂಶನ್‌ಗೆ ಒಳಪಡಿಸುತ್ತೇವೆಂದು ಅವರು ಹೇಳಿದ್ದರ ಬಗ್ಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆಯೆಂದು ಹೇಳುತ್ತೀರಾ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಜರತಾರ್‌ಗರ್ ಅವರು ಹೇಳಿದ್ದೆಲ್ಲವೂ ಸಂಪೂರ್ಣವಾಗಿ ಸರ್ಕಾರಕ್ಕೆ ಮನವರಿಕೆಯಾಗಿದೆ. ಕಾರ್ಮಿಕ ವಿರೋಧಿ ನೀತಿಯನ್ನು ಆಡಳಿತ ವರ್ಗದವರು ಅಲ್ಲಿ ಏನು ಪ್ರಾರಂಭ ಮಾಡಿದ್ದಾರೆ, ಇದು ನಿಜವಾಗಿಯೂ ಬಹಳ ಶೋಚನೀಯವಾದ ವಿಷಯ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಅವರು ಇನ್ನಾದರೂ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು ಕಾರ್ಮಿಕರಿಗೆ ರಕ್ಷಣೆ ನೀಡದಿದ್ದರೆ ಅವರ ಮೇಲೆ ಕಾನೂನು ಪ್ರಕಾರ ಪ್ರಾಸಿಕ್ಯೂಶನ್ ಮಾಡುವುದಕ್ಕೆ ಸರ್ಕಾರ ಮುಂದುವರೆಯುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಇನ್ನೆಷ್ಟು ಸಮಯದಲ್ಲಿ ಮಾಡುತ್ತೀರಿ ?

ಅಧ್ಯಕ್ಷರು.—ಈಗ ಇನ್ನು ಮುಂದೆ ಬೇಡಿಕೆ ಬಗ್ಗೆ ಚರ್ಚೆ ಇದೆ. ನಾನು ಎರಡೂ ಕಡೆಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇದು ಈ ದಿವಸವೇ ಮುಗಿಯಬೇಕು. ಪಟ್ಟಿಯೊಳಗೆ ಇನ್ನೂ ಸುಮಾರು 26 ಜನರ ಹೆಸರುಗಳು ಇವೆ, ಅಲ್ಲದೆ ಮಂತ್ರಿಗಳು ಬೇರೆ ಉತ್ತರವನ್ನು ಕೊಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲಾ ಮುಖಂಡರಲ್ಲಿ ನಾನು ಪ್ರಾರ್ಥನೆ ಮಾಡುವುದೇನೆಂದರೆ ದಯವಿಟ್ಟು ತಮ್ಮತಮ್ಮ ಸಮಯದ ಪರಿಮಿತಿಯಲ್ಲಿ ಮಾತನಾಡುವ ಪ್ರಯತ್ನ ಮಾಡಿ ಸಹಕರಿಸಬೇಕು.

ವಿತ್ತೀಯ ಕಾರ್ಯಕಲಾಪಗಳು
1983—84ನೇ ಸಾಲಿನ ಬೇಡಿಕೆಗಳ ಬಗ್ಗೆ

* ಶ್ರೀ ಕೆ. ಬಿ. ಶಾನಪ್ಪ (ಶಹಬಾದ್).—ಸನ್ಮಾನ್ಯ ಅಧ್ಯಕ್ಷರೇ, ಈ 1982-83ನೇ ಸಾಲಿನ ವಾರ್ಷಿಕ ವರದಿಯನ್ನು ಸದನದಲ್ಲಿ ಇಟ್ಟಿದ್ದಾರೆ. ಮುಖ್ಯವಾಗಿ ಈ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಆಫ್ 1961 ಪ್ರಕಾರ ಇದರಲ್ಲಿ ವಿವರಿಸಿದಂತಹ ಕೆಲವು ಟೆನೆನ್ಸಿ ಪ್ರಾಬ್ಲಮ್‌ಗಳನ್ನು ನಿವಾರಣೆ ಮಾಡಿದ್ದಾರೆ ಮತ್ತು ಎಷ್ಟು ಪೆಂಡಿಂಗ್ ಉಳಿದಿವೆ ಎಂಬುದನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಹೇಳಬೇಕಾದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಇನ್ನೂ ಕೂಡ ಅನೇಕ ಟೆನೆಂಟ್ಸ್ ಸಮಸ್ಯೆಗಳ ಬಗ್ಗೆ ಇತ್ಯರ್ಥ ಆಗಿಲ್ಲ. ಲ್ಯಾಂಡ್ ಟ್ರಿಬ್ಯುನಲ್ ರಚಿಸಿದ್ದಾರೆ ಅವರು ಕೊಟ್ಟಂತಹ ತೀರ್ಮಾನಗಳ ಮೇಲೆ ಅನೇಕ ಜನ ಜಮೀನ್ದಾರರು ಕೋರ್ಟಿಗೆ ಹೋಗಿದ್ದಾರೆ. ಅವರು ಹೋಗಿದ್ದರಿಂದ ಬಡರೈತರಿಗೆ ಯಾವ ಸಹಾಯವನ್ನು ಸರ್ಕಾರ ಮಾಡಬೇಕೆಂದಿತ್ತೋ, ಅದರ ಉಪಯೋಗ ಇವತ್ತು ವಾಸ್ತವವಾಗಿ ಆಗಿಲ್ಲ.

(ಶ್ರೀ ಪಿ. ರಾಮ್‌ದೇವ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವತ್ತು ಅನೇಕರಿಗೆ ಆಕ್ಯುಪೇಶನ್ ರೈಟ್ ಕೊಟ್ಟಿದ್ದರೂ, ಸರ್ಟಿಫಿಕೇಟ್ ವಿತರಣೆಯಾಗಿದ್ದರೂ ಕೂಡ, ದುರ್ದೈವದಿಂದ ಅವರಿಗೆ ಯಾವ ಅನುಕೂಲವೂ ಆಗಿಲ್ಲ, ಅವರ ಕೈಗೆ ಜಮೀನು ಬಂದಿಲ್ಲ. ಇಂತಹ ಸಮಸ್ಯೆಗಳು ಬಂದಾಗ ಯಾರೇ ಆಗಲಿ ಪ್ರೊಟೆಕ್ಷನ್ ಕೇಳಿದರೂ ಸಹ ಜಮೀನ್ದಾರಿ ಪದ್ಧತಿಯ ನೀತಿಯಿಂದಾಗಿ ಬ್ಯೂರೋಕ್ರೇಟಿಕ್ ಮೆಶಿನರಿ ಕೂಡ ಈ ರೈತರಿಗೆ ಇದುವರೆಗೂ ರಕ್ಷಣೆಯನ್ನು ಕೊಡಲಾಗದ ಪರಿಸ್ಥಿತಿ